ಆ) ಈ ಹಣವನ್ನು ಕಾಲ ಮಿತಿಯೊಳಗೆ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ತುಂಗಾ ಮೇಲ್ದಂಡೆ ಅಣೆಕಟ್ಟು ಕಾಮಗಾರಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಅಣೆಕಟ್ಟಿನ ಗೇಟ್ ಹಾಕಿದಲ್ಲಿ ಪರಿಹಾರ ಧನ ವಿತರಿಸದ ರೈತರ ಜಮೀನು ಮನೆ ಮುಳುಗಡೆಯಾಗುವುದು ಎಂಬ ಅಂಶ ಸರ್ಕಾರದ ಗಮನದಲ್ಲಿದೆಯೇ;

ಈ) ಪರಿಹಾರ ಧನ ವಿತರಿಸದೇ ನೀರನ್ನು ಸಹ ನಿಲ್ಲಿಸಿ, ಅಲ್ಲಿನ ನಿವಾಸಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸುವುದನ್ನು ಸರ್ಕಾರ ಸಮಂಜಸವೆಂದು ಭಾವಿಸುವುದೇ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಸದರಿ ಯೋಜನೆಯಡಿ ಮುಳುಗಡೆಯಾದ ಬೊಮ್ಮನಹಳ್ಳಿ ಹಾಗೂ ಕಣಗಾಲಕೊಪ್ಪ ಗ್ರಾಮಗಳ ಒಟ್ಟು 9-03 ಎಕರೆ ಕ್ಷೇತ್ರಕ್ಕೆ ಐತೀರ್ಪು ಘೋಷಿಸಿ ಅನುದಾನ ಬಿಡುಗಡೆಗೆ ಬೇಡಿಕೆಯಂತೆ ಒಟ್ಟು ರೂ. 13.16 ಲಕ್ಷಗಳನ್ನು ದಿನಾಂಕ 24.6.06 ರಂದು ಕರ್ನಾಟಕ ನೀರಾವರಿ ನಿಗಮದಿಂದ ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಪ್ರಕರಣಗಳಲ್ಲಿ, ಐತೀರ್ಪು ಘೋಷಿಸಿ ಅನುದಾನದ ಬಿಡುಗಡೆಗೆ ಯಾವುದೇ ಪ್ರಸ್ತಾವನೆ ಬಾಕಿ ಇರುವುದಿಲ್ಲ.

ಆ) ಹೌದು.

ಇ) ಇದೆ.

ಈ) ಭಾವಿಸುವುದಿಲ್ಲ ಮತ್ತು ಇಂತಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

484 (838) ಶ್ರೀ ಆರ್. ಧ್ರುವನಾರಾಯಣ (ಸಂತೇಮರಳ್ಳಿ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಧಾನಸಭಾ ಕ್ಷೇತ್ರಗಳ ಗ್ರಾಮೀಣಾ ಭಾಗದ ಹೋಬಳಿ ಕೇಂದ್ರಗಳಲ್ಲಿರುವ ಕೊಳಚೆ ಪ್ರದೇಶ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ವಾಸ ಮಾಡುವ ಮೋಳೆಗಳು ಕೊಳಚೆ ಪ್ರದೇಶಕ್ಕಿಂತ ಹೆಚ್ಚಿನ ಅವ್ಯವಸ್ಥೆಯ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಮೋಳೆ ಪ್ರದೇಶವನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎನ್. ಚಲುವರಾಯಸ್ವಾಮಿ (ವಸತಿ ಸಚಿವರ ಪರವಾಗಿ):

ಅ) ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಭಾಗದ ಹೋಬಳಿ ಕೇಂದ್ರಗಳಲ್ಲಿರುವ ಕೊಳಚೆ ಪ್ರದೇಶಗಳು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ವಾಸ ಮಾಡುವ ಮೋಳೆಗಳ ಪ್ರದೇಶಗಳು ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.